



ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

# ಸಿಇಟಿ ದಿಕ್ಸೂಚಿ

## ಸಾಮಾನ್ಯ ಪ್ರವೇಶ ಪರೀಕ್ಷೆ- 2025

ಸಮಗ್ರ ಪಾರದರ್ಶಕತೆಯ ಮೂಲಕ ವಿಶ್ವಾಸ



# ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಮತ್ತು ಪರಿಶೀಲನೆ

ಎಲ್ಲಾ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಒಂದೇ ಅರ್ಜಿ (common Application) ಆಗಿರುತ್ತದೆ

ಗಮನಿಸಿ: ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಕೋರ್ಸ್‌ಗಳ ಪ್ರವೇಶಕ್ಕೆ ಯುಜಿ ನೀಟ್ ಪರೀಕ್ಷೆ ತೆಗೆದುಕೊಳ್ಳಬೇಕು. ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶಕ್ಕೆ ನಾಟಾ ಪರೀಕ್ಷೆ ಬರೆಯಬೇಕು. ಆದರೆ, ಈ ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮಾತ್ರ ಕೆಇಎ ಮಾಡುತ್ತದೆ. ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ ವಿಜ್ಞಾನ ಕೋರ್ಸ್‌ಗಳು, ಯೋಗ & ನ್ಯಾಚುರೋಪತಿ, ಬಿ-ಫಾರ್ಮಾ, ಫಾರ್ಮಾ-ಡಿ, ಬಿಎಸ್ಸಿ ನರ್ಸಿಂಗ್ ಕೋರ್ಸ್‌ಳಿಗೆ ಸಿಇಟಿ ನಡೆಸಲಾಗುತ್ತದೆ.


ಇ-ಮೇಲ್ : keaugcet25@gmail.com<br>
**ವೆಬ್ ಸೈಟ್: cetonline.karnataka.gov.in**<br>
**X twitter: @KEA_karnataka**

**ಸಹಾಯವಾಣಿ: 080– 23460460**<br>
**ಬೆಳಿಗ್ಗೆ 10ರಿಂದ ಸಂಜೆ 6ಗಂಟೆವರೆಗೆ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**<br>
**18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**<br>
**ಅಭ್ಯರ್ಥಿಗಳು 9035053484 ಸಂಖ್ಯೆಯಿಂದ ಸಂದೇಶಗಳನ್ನು ಸ್ವೀಕರಿಸುತ್ತಾರೆ**




# ಪ್ರಿಯ ವಿದ್ಯಾರ್ಥಿಗಳೇ

ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಮೆಡಿಕಲ್, ಡೆಂಟಲ್, ಆಯುಷ್, ಕೃಷಿ ವಿಜ್ಞಾನ, ವೆಟರಿನರಿ, ಫಾರ್ಮಸಿ, ಬಿ.ಎಸ್.ಸಿ (ನರ್ಸಿಂಗ್), ಯೋಗ ಮತ್ತು ನ್ಯಾಚುರೋಪತಿ ಮುಂತಾದ ಕೋರ್ಸುಗಳನ್ನು ಓದಬೇಕೆಂಬುದು ಹೆಚ್ಚಿನ ವಿದ್ಯಾರ್ಥಿಗಳ ಆಕಾಂಕ್ಷೆಯಾಗಿದೆ. 2024ನೇ ಸಾಲಿನ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯ ಮಾಡಿ 2025ನೇ ಸಾಲಿನ ಸಿಇಟಿ ಪರೀಕ್ಷೆಗೆ ಸಿದ್ದತೆಗಳನ್ನು ಪ್ರಾಧಿಕಾರವು ಮಾಡಿಕೊಳ್ಳುತ್ತಿದೆ.

ಇದಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ, ಫಾರ್ಮಸಿ, ಬಿ.ಎಸ್. ಸಿ ನರ್ಸಿಂಗ್, ಯೋಗ ಮತ್ತು ನ್ಯಾಚುರೋಪತಿ ಕೋರ್ಸುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಿ, ರ್‍ಯಾಂಕ್ ಪ್ರಕಟಿಸಿ, ಮೆರಿಟ್ ಆಧಾರದ ಮೇಲೆ ಸರ್ಕಾರದ ನಿಯಮಗಳನ್ವಯ ಸೀಟು ಹಂಚಿಕೆ ಮತ್ತು ಇದರ ಅವಿಭಾಜ್ಯ ಅಂಗವಾಗಿರುವ ಹಲವು ಪ್ರಕ್ರಿಯೆಗಳನ್ನು ಅತ್ಯಂತ ಪಾರದರ್ಶಕವಾಗಿ ನಡೆಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಮೆಡಿಕಲ್, ಡೆಂಟಲ್, ಆಯುಷ್ ಕೋರ್ಸುಗಳಿಗೆ ಯುಜಿನೀಟ್ ಪರೀಕ್ಷೆಗೆ ಹಾಜರಾಗಿ ಅರ್ಹತೆ ಪಡೆದುಕೊಳ್ಳಲು ಅಭ್ಯರ್ಥಿಗಳಿಗೆ ಈ ಮೂಲಕ ಸೂಚಿಸಿದೆ. ಆರ್ಕಿಟೆಕ್ಚರ್ ಕೋರ್ಸಿಗೆ ಅಭ್ಯರ್ಥಿಗಳು ನಾಟಾ ಪರೀಕ್ಷೆಗೆ ಹಾಜರಾಗಬೇಕು.

ಈ ಪ್ರಕ್ರಿಯೆಯು ಸುಗಮವಾಗಿ ಮತ್ತು ಸರಾಗವಾಗಿ ನಡೆಯಬೇಕೆನ್ನುವುದು ಪ್ರತಿಯೊಬ್ಬರ ಅಪೇಕ್ಷೆ. ಇದು ಸಾಧ್ಯವಾಗಬೇಕಾದರೆ ಆನ್‌ಲೈನ್ ಅರ್ಜಿ ತುಂಬುವುದು ಹೇಗೆ, ಅದಕ್ಕೆ ಒದಗಿಸಬೇಕಾದ ವಿವರಗಳೇನು, ದಾಖಲೆಗಳೇನು, ಪ್ರಮಾಣಪತ್ರಗಳೇನು, ಯಾವ ಪ್ರವರ್ಗದ ಅಭ್ಯರ್ಥಿಗಳು ಯಾವ ಅರ್ಹತಾ ಕಂಡಿಕೆಯಡಿ ಬರುತ್ತಾರೆ, ಮೀಸಲಾತಿಯ ಸ್ವರೂಪವೇನು, ಕನ್ನಡ ಭಾಷಾ ಪರೀಕ್ಷೆ ಇತ್ಯಾದಿ ವಿಷಯಗಳ ಬಗೆಗೆ ಮಾಹಿತಿಗಳನ್ನು ತಿಳಿದುಕೊಳ್ಳಬೇಕಾದ್ದು ಅಪೇಕ್ಷಣೀಯ.

ಇದನ್ನೆಲ್ಲ ಗಮನದಲ್ಲಿ ಇಟ್ಟುಕೊಂಡು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2025ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಅನ್ವಯಿಸುವಂತೆ ಅತ್ಯಂತ ಸರಳವಾದ ಭಾಷೆಯಲ್ಲಿ ಈ ಕೈಪಿಡಿಯನ್ನು ಸಿದ್ಧಪಡಿಸಿದೆ. ಇದೊಂದು ಉಪಯುಕ್ತ ದಿಕ್ಸೂಚಿಯಾಗಲಿದೆ ಎನ್ನುವುದು ನಮ್ಮ ನಂಬಿಕೆ. ಯಾವುದೇ ಅಂಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕೆನಿಸಿದರೆ, ಪ್ರಾಧಿಕಾರದ ಜಾಲತಾಣ **http://cetonline.karnataka.gov.in** ನೋಡಬಹುದು.

**ವೃತ್ತಿಪರ ಶಿಕ್ಷಣದ ಕನಸು ಕಟ್ಟಿಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿ/ನಿಗೂ ಪ್ರಾಧಿಕಾರವು ಉಜ್ವಲ ಭವಿಷ್ಯವನ್ನು ಬಯಸುತ್ತದೆ. ನಿಮ್ಮೆಲ್ಲರಿಗೂ ಶುಭವಾಗಲಿ – ನಿಮ್ಮ ಕನಸು ನನಸಾಗಲಿ ಎಂದು ಆಶಿಸುವ.**

**ಡಾ.ಶರಣ ಪ್ರಕಾಶ ಪಾಟೀಲ**
ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ,
ಜೀವನೋಪಾಯ ಇಲಾಖೆ ಸಚಿವರು ಹಾಗೂ
ಸಹ ಅಧ್ಯಕ್ಷರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಡಾ ಎಂ.ಸಿ.ಸುಧಾಕರ**
ಉನ್ನತ ಶಿಕ್ಷಣ ಇಲಾಖೆ ಸಚಿವರು ಹಾಗೂ
ಅಧ್ಯಕ್ಷರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಎಚ್. ಪ್ರಸನ್ನ**, ಭಾ.ಆ.ಸೇ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಎಂ.ಎಸ್. ಶ್ರೀಕರ**, ಭಾ.ಆ.ಸೇ
ಪ್ರಧಾನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ
ಉಪಾಧ್ಯಕ್ಷರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## ಸಿಇಟಿ–2025 ರ ಪರೀಕ್ಷೆಗೆ ಹಾಜರಾಗಬೇಕಾದ ವಿಷಯಗಳ ವಿವರ

| ಕ್ರ. ಸಂ. | ಮೊದಲನೇ ವರ್ಷದ ಪ್ರವೇಶ ಕೋರ್ಸ್‌ಗಳು | ಸಿಇಟಿ–2025 ರ ಯಾವ ವಿಷಯಗಳಿಗೆ ಹಾಜರಾಗಬೇಕು |
|---|---|---|
| 1 | ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ (PCM) |
| 2 | ಕೃಷಿ ವಿಜ್ಞಾನ ಕೋರ್ಸ್‌ಗಳು [ಬಿ.ಎಸ್‌ಸಿ. (ಆನರ್ಸ್) ಕೃಷಿ, ಬಿ.ಎಸ್‌ಸಿ. (ಆನರ್ಸ್) ಅರಣ್ಯ ವಿಜ್ಞಾನ, ಬಿ.ಎಸ್‌ಸಿ. (ಆನರ್ಸ್) ರೇಷ್ಮೆಕೃಷಿ, ಬಿ.ಎಸ್‌ಸಿ. (ಆನರ್ಸ್) ತೋಟಗಾರಿಕೆ, ಬಿ.ಎಸ್‌ಸಿ. (ಆನರ್ಸ್) ಸಮುದಾಯ ವಿಜ್ಞಾನ, ಬಿ.ಟೆಕ್. (ಕೃಷಿ ಇಂಜಿನಿಯರಿಂಗ್), ಬಿ.ಟೆಕ್. (ಬಯೋಟೆಕ್ನಾಲಜಿ), ಬಿ.ಟೆಕ್. (ಹೈನುಗಾರಿಕೆ ತಂತ್ರಜ್ಞಾನ), ಬಿ.ಎಫ್. ಎಸ್‌ಸಿ. (ಮೀನುಗಾರಿಕೆ), ಬಿ.ಟೆಕ್. (ಆಹಾರ ತಂತ್ರಜ್ಞಾನ), ಬಿ.ಎಸ್‌ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ] | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ, ಜೀವಶಾಸ್ತ್ರ (PCMB) |
| 3 | ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪತಿ, ಬಿ.ಎಸ್.ಸಿ (ನರ್ಸಿಂಗ್) | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ (PCB) |
| 4 | ಬಿ.ಫಾರ್ಮಾ, 2ನೇ ವರ್ಷದ ಬಿ–ಫಾರ್ಮಾ ಮತ್ತು ಫಾರ್ಮಾ–ಡಿ | ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಅಥವಾ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ (PCM or PCB) |

## ಇತರೆ ಕೋರ್ಸ್‌ಗಳಿಗೆ ಅಭ್ಯರ್ಥಿಗಳು 2025ರಲ್ಲಿ ಹಾಜರಾಗಬೇಕಾಗಿರುವ ಪ್ರವೇಶ ಪರೀಕ್ಷೆಗಳು

| | | | |
|---|---|---|---|
| 1 | ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳು | ಯುಜಿನೀಟ್ (UGNEET) | ಯುಜಿನೀಟ್ ಅಥವಾ ನಾಟಾ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವುದರ ಜೊತೆಗೆ, ಅಭ್ಯರ್ಥಿಗಳು ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಸಿಇಟಿ–2025ಕ್ಕೆ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯ ವಾಗಿರುತ್ತದೆ. |
| 2 | ಆರ್ಕಿಟೆಕ್ಚರ್ | ನಾಟಾ (NATA) | |

| | | |
|---|---|---|
| 1 | ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಹತೆ ಪಿಯು ಅಂಕಗಳ ಆಧಾರದ ಮೇಲೆ | ಯಾವುದೇ ಪ್ರವೇಶ ಪರೀಕ್ಷೆ ಇಲ್ಲ – ಆದರೆ ಅಭ್ಯರ್ಥಿಗಳು ಸಿಇಟಿ–2025ಕ್ಕೆ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯ ವಾಗಿರುತ್ತದೆ. |

- Claims Certificate ನಲ್ಲಿ "Successfully Verified" ಎಂದು ನಮೂದಿಸಿದ್ದರೆ ಅಂತಹ ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಯಾವುದೇ ಕಚೇರಿಗೆ / ಕಾಲೇಜಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ನಂತರದ ದಿನಗಳಲ್ಲಿ ಸಿಇಟಿ ಫಲಿತಾಂಶದ ನಂತರ ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
- "Claimed Verified OR Claimed not verified OR not Claimed" ಎಂದು Claims Certificate ನಮೂದಾಗಿದ್ದರೆ ಅಭ್ಯರ್ಥಿಗಳು 2ನೆ ಪಿಯುಸಿ / 12ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿರುವ ಆಯಾ ಕಾಲೇಜಿಗೆ ಭರ್ತಿ ಮಾಡಿದ ಅರ್ಜಿಯನ್ನು ಮತ್ತು ಕ್ಲೇಮ್ಸ್ ಮಾಡಿರುವ ಎಲ್ಲಾ ಮೂಲ ದಾಖಲೆಗಳನ್ನು ಪ್ರಾಂಶುಪಾಲರಿಗೆ ತೋರಿಸಿ ಒಂದು ಸೆಟ್ ಪ್ರತಿಗಳನ್ನು ಕ್ಲೇಮ್ಸ್ ಸರ್ಟಿಫಿಕೇಟ್ ನೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ಕಾಲೇಜಿನವರು ಕ್ಲೇಮ್ಸ್ ಸರ್ಟಿಫಿಕೇಟ್ ನೊಂದಿಗೆ ಪರಿಶೀಲನೆ ಮಾಡಿದ ನಂತರ ಅಭ್ಯರ್ಥಿಯ ವಿವರಗಳನ್ನು ಅನುಮೋದಿಸುತ್ತಾರೆ.
- ಒಂದು ವೇಳೆ ಅಭ್ಯರ್ಥಿಯು ಕರ್ನಾಟಕದಲ್ಲಿ 10 ವರ್ಷಗಳು ಕನ್ನಡ ಮಾಧ್ಯಮದಲ್ಲಿ ಓದಿರುವ ವ್ಯಾಸಂಗದ ಮೀಸಲಾತಿ ಅಥ–ವಾ 10 ವರ್ಷಗಳು ಗ್ರಾಮೀಣ ಪ್ರದೇಶಗಳಲ್ಲಿ ಓದಿರುವ ಕುರಿತು ಮೀಸಲಾತಿ ಅಥವಾ 10 ವರ್ಷಗಳು ಓದಿ ಭಾಷಾ ಅಲ್ಪ ಸಂಖ್ಯಾತ ಮೀಸಲಾತಿ ಅಥವಾ 10 ವರ್ಷಗಳು ಓದಿ ಧಾರ್ಮಿಕ ಅಲ್ಪಸಂಖ್ಯಾತದ ಮೀಸಲಾತಿ ಕ್ಲೇಮ್ ಮಾಡಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಆಯಾ ಕಾಲೇಜಿನಲ್ಲಿಯೆ ಕಡ್ಡಾಯವಾಗಿ ಅಗತ್ಯ ವಿರುವ ಮೂಲ ಪ್ರಮಾಣ ಪತ್ರಗಳನ್ನು ತೋರಿಸಿ ಪರಿಶೀಲಿಸಿಕೊಳ್ಳಲು ಸೂಚಿಸಲಾಗಿದೆ.
- ವಿಶೇಷ ಕ್ಯಾಟಗರಿಗಳಾದ ಎನ್‌ಸಿಸಿ, ಕ್ರೀಡೆ, ಸೈನಿಕ, ಮಾಜಿ ಸೈನಿಕ, ಸಿಎಪಿಎಫ್, ಮಾಜಿ ಸಿಎಪಿಎಫ್, ಸ್ಕೌಟ್ಸ್ ಅಂಡ್ ಗೈಡ್ಸ್, ಆಂಗ್ಲೋ ಇಂಡಿಯನ್ಸ್ ಕೋಟದ ಅಡಿಯಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಕೆಇಎ ನಲ್ಲಿ ಖುದ್ದಾಗಿ ಸಲ್ಲಿಸಲು ಪ್ರತ್ಯೇಕವಾಗಿ ಸಿಇಟಿ ಪರೀಕ್ಷೆ ನಂತರ ದಿನಾಂಕಗಳನ್ನು ನೀಡಲಾಗುವುದು.

# ಈ ವರ್ಷ ಹೊಸತೇನಿದೆ?

- ರಾಜ್ಯದಲ್ಲಿರುವ ಪ್ರತಿಯೊಂದು ಪಿಯುಸಿ ಮತ್ತು ಸಿಬಿಎಸ್‌ಸಿ/ ಸಿಐಎಸ್‌ಇ ಕಾಲೇಜುಗಳಿಗೆ ಒಂದು ಲಾಗಿನ್ ಅನ್ನು ನೀಡಲಾಗುತ್ತದೆ. ಅಭ್ಯರ್ಥಿಗಳು ಸಿಇಟಿ– 2025ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿದ ನಂತರ ಕ್ಲೇಮ್ಸ್ ಸರ್ಟಿಫಿಕೇಟ್ ಡೌನ್‌ಲೋಡ್ ಮಾಡಲು ಅವಕಾಶ ನೀಡಲಾಗುವುದು. ಅಭ್ಯರ್ಥಿಗಳು ಅರ್ಜಿಯ ಪ್ರತಿಯೊಂದಿಗೆ ಕ್ಲೇಮ್ಸ್ ಸರ್ಟಿಫಿಕೇಟ್ ನಲ್ಲಿರುವ ಸೂಚನೆಗೆ ಅನುಗುಣವಾಗಿ ತಾವು ವ್ಯಾಸಂಗ ಮಾಡುತ್ತಿರುವ 2ನೇ ಪಿಯುಸಿ ಅಥವಾ 12ನೇ ತರಗತಿಯ ಕಾಲೇಜಿನಲ್ಲಿ ಎಲ್ಲಾ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ದಾಖಲೆಗಳನ್ನು ಅಪ್‌ಲೋಡ್ ಮಾಡುವ ಅಗತ್ಯವಿಲ್ಲ. ಒಂದು ಸೆಟ್ ಅನ್ನು ಕಾಲೇಜಿನಲ್ಲಿ ನೀಡಬೇಕು. ಕಾಲೇಜಿನ ಪ್ರಾಂಶುಪಾಲರು ಅಥವಾ ಅವರು ನಿಯೋಜಿಸುವ ಒಬ್ಬರು ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಪೋರ್ಟಲ್ ಮುಖಾಂತರ ಕೆಇಎ ಗೆ ಅಭ್ಯರ್ಥಿಯ ವಿವರಗಳನ್ನು UPLOAD ಮಾಡುತ್ತಾರೆ. ನಂತರ ಅಭ್ಯರ್ಥಿಗಳಿಗೆ ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

- ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವ ಜಾತಿ / ಜಾತಿ ಆದಾಯ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆಯನ್ನು ಮತ್ತು – 371(ಜೆ) ಆರ್.ಡಿ ಸಂಖ್ಯೆಯನ್ನು ಆಧರಿಸಿ ಅಭ್ಯರ್ಥಿಯ ಜಾತಿ, ಆದಾಯ ಮತ್ತು 371(ಜೆ)ಗೆ ಸಂಬಂಧಿಸಿದ ಮಾಹಿತಿಯನ್ನು ವೆಬ್ ಸೇವೆಯ ಮೂಲಕ ಪಡೆಯಲಾಗುವುದು. ಅಭ್ಯರ್ಥಿಗಳು ಎಚ್ಚರದಿಂದ ಸರಿಯಾದ ಆರ್.ಡಿ ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಲು ಸೂಚಿಸಿದೆ. (ಆರ್.ಡಿ ಸಂಖ್ಯೆ ಸಂಬಂಧಿತ ಎಲ್ಲಾ ಪ್ರಮಾಣ ಪತ್ರಗಳಿಗೆ ಅನ್ವಯ)

- ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯನ್ನು Application-Cum-Verification Module ಆಗಿ ಸಿದ್ದಪಡಿಸಲಾಗಿದೆ. ಅಭ್ಯರ್ಥಿಗಳು ದಾಖಲಿಸುವ ವಿವರಗಳನ್ನು ಅಂದರೆ, ಶಾಲೆಗಳ ವ್ಯಾಸಂಗ, ಕನ್ನಡ ಮಾಧ್ಯಮ, ಜಾತಿ, ಆದಾಯ ಮುಂತಾದ ವಿವರಗಳನ್ನು SATS (Student Achievement Tracking System) ಹಾಗೂ ಕಂದಾಯ ಇಲಾಖೆಯ ವೆಬ್ ಸೇವೆಯ ಮುಖಾಂತರ ಆನ್‌ಲೈನ್ ಮೂಲಕವೇ ಪರಿಶೀಲಿಸಲಾಗುವುದು. ಭೌತಿಕವಾಗಿ ದಾಖಲೆಗಳ ಪರಿಶೀಲನೆ ಇರುವುದಿಲ್ಲ.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಸಲ್ಲಿಸುವ ಪ್ರಮಾಣ ಪತ್ರಗಳ ಆಧಾರದ ಮೇಲೆ ಸೀಟು ಹಂಚಿಕೆಯಾಗುತ್ತದೆ. ಆದರೆ ಎಸ್.ಸಿ, ಎಸ್.ಟಿ, ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳು ಆದಾಯ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆಯನ್ನು ನಮೂದಿಸಿದಲ್ಲಿ ಮಾತ್ರ ಶುಲ್ಕ ಪಾವತಿಸುವುದರಿಂದ ವಿನಾಯಿತಿ ಪಡೆಯುತ್ತಾರೆ. ಆದ್ದರಿಂದ ಎಸ್.ಸಿ,ಎಸ್.ಟಿ, ಮತ್ತು ಪ್ರವರ್ಗ–1ರ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಜೊತೆಯಲ್ಲಿ ಆದಾಯ ಪ್ರಮಾಣ ಪತ್ರವನ್ನೂ ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆಯಲು ಸೂಚಿಸಿದೆ ಮತ್ತು ಆದಾಯ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ಸರಿಯಾಗಿ ಎಚ್ಚರದಿಂದ ನಮೂದಿಸಬೇಕು.



ಕರ್ನಾಟಕ ಪರೀಕ್ಷಾ ಪ್ರಾಧಿಕಾರ






- ಗ್ರಾಮೀಣ ಮೀಸಲಾತಿಯನ್ನು ಪಡೆಯಲಿಚ್ಛಿಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅವರು ಓದಿದ ಶಾಲೆಯ / ಪ್ರೌಢಶಾಲೆಯ ಮುಖ್ಯಸ್ಥರಿಂದ ಪಡೆದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಸಂಬಂಧಪಟ್ಟ ತಹಸೀಲ್ದಾರರಿಂದ ಪಡೆದ ಆರ್.ಡಿ ಸಂಖ್ಯೆ ಇರುವ ಪರಿಶೀಲನಾ ಪ್ರಮಾಣಪತ್ರವನ್ನು Non Creamy Layer Certificate (NCLC) ಸಹ ಸಲ್ಲಿಸಬೇಕು, ಆರ್.ಡಿ ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಬೇಕು.

- ಸರ್ಕಾರಿ ಆದೇಶ ಸಂಖ್ಯೆ. ಹಿಂವಕ /– 304 / ಬಿಸಿಎ / 2017 ದಿನಾಂಕ. 14.09.2018 ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗದ ಅಭ್ಯರ್ಥಿ ಮತ್ತು ಅವರ ತಂದೆ–ತಾಯಿಯ ಒಟ್ಟು ವಾರ್ಷಿಕ ಆದಾಯ ಮಿತಿ ರೂ. 8.00 ಲಕ್ಷ ಆಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

- ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ತಮ್ಮದೇ ಮೊಬೈಲ್ ಫೋನ್ ನಂಬರ್ ಮತ್ತು ಇ–ಮೇಲ್ ಕೊಡಬೇಕು. ಏಕೆಂದರೆ, ಸಿಇಟಿಗೆ ಸಂಬಂಧಿಸಿದ ಮಾಹಿತಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಗಿಂದಾಗ್ಗೆ ಎಸ್‌ಎಂಎಸ್/ಇ–ಮೇಲ್ ಮೂಲಕ ರವಾನಿಸುತ್ತಿರುತ್ತದೆ. ಯಾವುದೇ ಕಾರಣಕ್ಕೂ ಈ ಮಾಹಿತಿಗಳನ್ನು ಅಭ್ಯರ್ಥಿಗಳು ಮೂರನೆ ವ್ಯಕ್ತಿಗೆ ನೀಡಬಾರದು.

- ಸಿಇಟಿಗೆ ಸಂಬಂಧಿಸಿದ ವಿಚಾರಗಳಲ್ಲಿ ಅಭ್ಯರ್ಥಿಗಳಾಗಲಿ, ಪೋಷಕರಾಗಲಿ ಯಾವುದೇ ಮಧ್ಯವರ್ತಿಗಳನ್ನು ನಂಬಿ, ಮೋಸ ಹೋಗಬಾರದು. ಏಕೆಂದರೆ, ಸೀಟು ಹಂಚಿಕೆಯು ಸರಕಾರವು ಒದಗಿಸುವ ಸೀಟ್ ಮ್ಯಾಟ್ರಿಕ್ಸ್ ಆಧರಿಸಿ, ಮೆರಿಟ್ ಮೇಲೆ ಮಾತ್ರವೇ ನಡೆಯುತ್ತದೆ ಎನ್ನುವುದು ನಿಮಗೆ ತಿಳಿದಿರಲಿ.





# ವೈದ್ಯಕೀಯ, ದಂತವೈದ್ಯಕೀಯ ಕೋರ್ಸುಗಳ ಪ್ರವೇಶ

- ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳ ಪ್ರವೇಶಕ್ಕಾಗಿ ಯುಜಿನೀಟ್–2025 ರಲ್ಲಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ, ಅವರುಗಳು ಇಂಜಿನಿಯರಿಂಗ್ ಇತ್ಯಾದಿ ಕೋರ್ಸುಗಳಿಗೆ ಸಲ್ಲಿಸುವ ದಾಖಲೆಗಳನ್ನು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳ ಪ್ರವೇಶಕ್ಕೂ ಸಹ ಪರಿಗಣಿಸಲಾಗುವುದು. ಇದಲ್ಲದೆ, ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸುಗಳಿಗೆ ಸಂಬಂಧಿಸಿದ ಇತರೆ ಮೀಸಲಾತಿಗಳಾದ ಭಾಷಾ ಅಲ್ಪಸಂಖ್ಯಾತ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಹಾಗೂ ಎನ್.ಆರ್.ಐ. ವಾರ್ಡ್ ಮೀಸಲಾತಿ, ಹಾಗೂ ಸೇಂಟ್ ಜಾನ್ ವೈದ್ಯಕೀಯ ಕಾಲೇಜಿನ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಿದ್ಧಪಡಿಸಿಟ್ಟುಕೊಳ್ಳಲು ಸೂಚಿಸಿದೆ. ಈ ಬಗ್ಗೆ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ವಿವರಗಳನ್ನು ನೀಡಲಾಗುವುದು.

- ಭಾಷಾ ಅಲ್ಪಸಂಖ್ಯಾತ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಹಾಗೂ ಎನ್.ಆರ್.ಐ. ವಾರ್ಡ್ ಮೀಸಲಾತಿಗಳು ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ವೆಟರಿನರಿ, ಆಯುಷ್, ಬಿ–ಫಾರ್ಮಾ, ಫಾರ್ಮಾ–ಡಿ ಕೋರ್ಸುಗಳಿಗೆ ಅನ್ವಯಿಸುವುದಿಲ್ಲ.

## ಅರ್ಜಿ ಸಲ್ಲಿಸಿದ ನಂತರ ನೀವು ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ ಸಲ್ಲಿಸಲು ಸಿದ್ಧಪಡಿಸಿ ಇಟ್ಟುಕೊಳ್ಳಬೇಕಾದ ದಾಖಲೆಗಳ ವಿವರ

1. ಸಿಇಟಿ–2025ಕ್ಕೆ ಭರ್ತಿ ಮಾಡಿ ಅಂತಿಮವಾಗಿ ಸಲ್ಲಿಸಿರುವ ಪ್ರತಿ
2. ಡೌನ್ ಲೋಡ್ ಮಾಡಿಕೊಳ್ಳುವ ಕ್ಲೇಮ್ಸ್ ಸರ್ಟಿಫಿಕೇಟ್
3. ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕಪಟ್ಟಿ
4. 7 ವರ್ಷದ ವ್ಯಾಸಂಗ ಪ್ರಮಾಣ ಪತ್ರ:

- 1 ರಿಂದ 12ನೇ ತರಗತಿಯವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ (ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ / ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಮೇಲುರುಜು ಸಹಿ ಹೊಂದಿರುವ) ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಒಳಗೊಂಡಂತೆ.


- ವರ್ಷದ ವ್ಯಾಸಂಗ ಪ್ರಮಾಣ ಪತ್ರದಲ್ಲಿ ಸಿಬಿಎಸ್‌ಸಿ/ ಐಸಿಎಸ್‌ಸಿ ಅಭ್ಯರ್ಥಿಗಳಿಗೆ ಮೇಲುರುಜು ಅಗತ್ಯತೆ ಇರುವುದಿಲ್ಲ.



KEA ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## ‘ನಿಮಗೆ ಅನ್ವಯವಾಗುವಂತಿದ್ದರೆ ಮಾತ್ರ’

## ಈ ಕೆಳಗಿನ ದಾಖಲೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಿ



**05** ಎಸ್.ಸಿ, ಎಸ್.ಟಿ., ಪ್ರವರ್ಗ–1 ಮತ್ತು ಸಾಮಾನ್ಯ ವರ್ಗದವರು ಪ್ರತ್ಯೇಕವಾಗಿ ಆರ್ಡಿ ಸಂಖ್ಯೆ ಇರುವ ಅಭ್ಯರ್ಥಿಯ ಹೆಸರಿನಲ್ಲಿ ಪಡೆದಿರುವ ಆದಾಯ ಪ್ರಮಾಣಪತ್ರ. ಸಿದ್ದಪಡಿಸಿಟ್ಟುಕೊಳ್ಳಬೇಕು. ಮತ್ತು ಆನ್‌ಲೈನ್ ಅರ್ಜಿಯಲ್ಲಿ ಆರ್.ಡಿ ಸಂಖ್ಯೆ ನಮೂದಿಸಬೇಕು. [“ಸಂಖ್ಯಾಧಿಕ ಕೋಟಾ” ಗೆ ಅರ್ಹತೆ ಪಡೆಯಲು. (Supernumerary Quota)]

ಅರ್ಹ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು, ಅವರು ಜಾತಿ ಪ್ರಮಾಣ ಪತ್ರದೊಂದಿಗೆ ಸಲ್ಲಿಸುವ ಆದಾಯ ಪ್ರಮಾಣ ಪತ್ರವನ್ನು “ಸಂಖ್ಯಾಧಿಕ ಕೋಟಾ” ಸೀಟುಗಳಿಗೆ ಪರಿಗಣಿಸಲಾಗುವುದು.

Please note EWS certificate or Arya Vyshya income certificate will not be considered as income certificate to claim SNQ seats.

---

### 06 ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ :

1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣಾವಧಿ ಶೈಕ್ಷಣಿಕ ವರ್ಷಗಳ ಕಾಲ ಕರ್ನಾಟಕದಲ್ಲಿ ಅಥವಾ ಕರ್ನಾಟಕ ರಾಜ್ಯದ ಹೊರಗಡೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲೆ ರುಜು ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣ ಪತ್ರ ಸಿದ್ದಪಡಿಸಿಟ್ಟುಕೊಳ್ಳಬೇಕು.

---

### 07 ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ :


ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಅಥವಾ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರಲ್ಲಿ ಹೇಳಿರುವಂತೆ ಬೃಹತ್ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆಯ ಹಂತದಲ್ಲಿರುವ ಪ್ರದೇಶಗಳನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯದಲ್ಲಿನ ಇತರ ಪ್ರದೇಶಗಳಲ್ಲಿ ಇರುವ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ, 10 ಪೂರ್ಣಾವಧಿ ಶೈಕ್ಷಣಿಕ ವರ್ಷಗಳವರೆಗೆ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ವಿದ್ಯಾರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ.
ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರದ ಜೊತೆಯಲ್ಲಿ ಪರಿಶೀಲನಾ ಪ್ರಮಾಣ ಪತ್ರದ (ಎನ್‌ಸಿಎಲ್‌ಸಿ) ಆರ್.ಡಿ ಸಂಖ್ಯೆ ನಮೂದಿಸಬೇಕು.



## 08 ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ :

(ಆರ್.ಡಿ ಸಂಖ್ಯೆ ಇರುವ ಮತ್ತು ಚಾಲ್ತಿ / Validity ಇರುವ)


ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ / ಆದಾಯ ಪ್ರಮಾಣ ಪತ್ರಗಳು (ಅಧಿಕಾರ ವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ ಇತರೆ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿ ಗಳಂತಹ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು)



ಜಾತಿ / ಜಾತಿ ಆದಾಯ ಪ್ರಮಾಣ ಪತ್ರವನ್ನು ಅಭ್ಯರ್ಥಿಯ ಹೆಸರಿನಲ್ಲಿ ಪಡೆದಿರಬೇಕು. ಅರ್ಜಿ ಸಲ್ಲಿಸುವ ಸಮಯದಲ್ಲಿ ಆರ್.ಡಿ ಸಂಖ್ಯೆ ನಮೂದಿಸಬೇಕು.

## 09 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು :

ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಸಲ್ಲಿಸುವ ಪ್ರಮಾಣ ಪತ್ರಗಳ ಆಧಾರದ ಮೇಲೆ ಸೀಟು ಹಂಚಿಕೆಯಾಗುತ್ತದೆ. ಆದರೆ ಎಸ್.ಸಿ, ಎಸ್.ಟಿ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳು ಆದಾಯ ಪ್ರಮಾಣ ಪತ್ರದ ಆರ್ಡಿ ಸಂಖ್ಯೆಯನ್ನು ನಮೂದಿಸಿದಲ್ಲಿ ಮಾತ್ರ ಶುಲ್ಕ ಪಾವತಿಸುವುದರಿಂದ ವಿನಾಯಿತಿ ಪಡೆಯುತ್ತಾರೆ. ಆದ್ದರಿಂದ ಎಸ್.ಸಿ, ಎಸ್.ಟಿ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಜೊತೆಯಲ್ಲಿ ಆದಾಯ ಪ್ರಮಾಣ ಪತ್ರವನ್ನೂ ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆಯಲು ಮತ್ತು ಅರ್ಜಿ ಹಾಕುವಾಗ ಆರ್.ಡಿ ಸಂಖ್ಯೆ ನಮೂದಿಸಲು ತಿಳಿಸಿದೆ.




## 10 371 (ಜೆ) – ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ :

ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ (ಅನುಚ್ಛೇದ 371 (ಜೆ) ಯನ್ನು ಕೋರುವ ಅಭ್ಯರ್ಥಿಗಳು, ಸಂಬಂಧಪಟ್ಟ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್) ಅವರು ಆರ್.ಡಿ ಸಂಖ್ಯೆ ಇರುವ ಅನುಬಂಧ–ಎ (ಅರ್ಹತಾ ಪ್ರಮಾಣ ಪತ್ರ– ನಿಯಮ 3(3)ರಲ್ಲಿ ನೀಡಿರುವ ಪ್ರಮಾಣಪತ್ರ.



ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಜಾತಿ /ಜಾತಿ-ಆದಾಯ ಪ್ರಮಾಣ ಪತ್ರ /ಆದಾಯ ಪ್ರಮಾಣ ಪತ್ರ /371 (ಜೆ))**
**– ಹೈದರಾಬಾದ್-ಕರ್ನಾಟಕ – ಅನುಬಂಧ-ಎ ಯನ್ನು ಅಭ್ಯರ್ಥಿಯ ಹೆಸರಿನಲ್ಲೇ ಪಡೆದಿರಬೇಕು**

# ವಿಶೇಷ ಪ್ರವರ್ಗಗಳ ಪ್ರಮಾಣಪತ್ರಗಳು

## ಎನ್.ಸಿ.ಸಿ. & ಕ್ರೀಡಾ ಕೋಟಾ

- ಎನ್.ಸಿ.ಸಿ ಮತ್ತು ಕ್ರೀಡಾ ಕೋಟಾಗಳ ಅಡಿಯಲ್ಲಿ ಅರ್ಹತೆ ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ಶಾಲೆ/ಕಾಲೇಜುಗಳಿಂದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿದ್ದಕ್ಕೆ ಸಂಬಂಧಿಸಿದ ಸೂಕ್ತ ಪ್ರಮಾಣ ಪತ್ರವನ್ನು ಪಡೆದುಕೊಂಡು, ಪ್ರಾಧಿಕಾರವು ನಿಗದಿ ಪಡಿಸುವ ದಿನಾಂಕಗಳಂದು ಸಲ್ಲಿಸಬೇಕು.



## ಕೃಷಿಕರ ಕೋಟಾ

- ರೈತಾಪಿ ಕುಟುಂಬದ ಮಕ್ಕಳಿಗೆ ಕೃಷಿ ವಿಜ್ಞಾನ ಕೋರ್ಸುಗಳಲ್ಲಿ ಮೀಸಲಾತಿ ಸೌಲಭ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ನಡೆಸಲಾಗುವ ಪ್ರಾಯೋಗಿಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಶೇ.50ರಷ್ಟು ಅಂಕಗಳನ್ನು ಪಡೆದಿರಬೇಕು. ಈ ಪರೀಕ್ಷೆಯನ್ನು ಬೆಂಗಳೂರು, ಹಾಸನ, ಮಂಡ್ಯ, ರಾಯಚೂರು, ಮೈಸೂರು, ಮುನಿರಾಬಾದ್, ಮಂಗಳೂರು, ಬೀದರ್, ಬಾಗಲಕೋಟೆ, ಧಾರವಾಡ, ವಿಜಯಪುರ, ಹಿರಿಯೂರು, ಶಿವಮೊಗ್ಗ ಗೋಕಾಕ ತಾಲ್ಲೂಕಿನ ಅರಬಾವಿ ಮತ್ತು ಕೋಲಾರ ಜಿಲ್ಲೆಯ ಟಮಕ- ಈ ಸ್ಥಳಗಳಲ್ಲಿ ಕೃಷಿವಿಶ್ವವಿದ್ಯಾಲಯದವರು ನಡೆಸುತ್ತಾರೆ. ಅಭ್ಯರ್ಥಿಗಳು 'ಕೃಷಿಕರ ಕೋಟಾ ಪ್ರಮಾಣಪತ್ರ'ದೊಂದಿಗೆ ಉಳಿದ ದಾಖಲೆಗಳನ್ನು ಇಟ್ಟುಕೊಂಡಿರಬೇಕು ಮತ್ತು ಪರೀಕ್ಷೆಯಂದು ನಿಗದಿತ ಶುಲ್ಕವನ್ನು ಪಾವತಿಸಬೇಕು. (ಹೆಚ್ಚಿನ ವಿವರಗಳನ್ನು ಆಯಾ ಕೃಷಿ ವಿಶ್ವವಿದ್ಯಾಲಯದಿಂದ ಪಡೆಯಬಹುದು)



## ವಿಶೇಷ ಮೀಸಲಾತಿಗಳು

- ಸರಕಾರದ ನಿಯಾಮವಳಿ ಅನ್ವಯ ಸ್ಕೌಟ್ಸ್ & ಗೈಡ್ಸ್, ರಕ್ಷಣಾ ಸಿಬ್ಬಂದಿಗಳ ಮಕ್ಕಳು, ಮಾಜಿ ರಕ್ಷಣಾ ಸಿಬ್ಬಂದಿಗಳ ಮಕ್ಕಳು, ವಿಶೇಷಚೇತನರು, ಆಂಗ್ಲೋ-ಇಂಡಿಯನ್ಸ್, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ಹಾಲಿ ಮತ್ತು ನಿವೃತ್ತ ಸಿಬ್ಬಂದಿಯ ಮಕ್ಕಳಿಗೆ ಕೂಡ ವೃತ್ತಿಪರ ಕೋರ್ಸುಗಳಲ್ಲಿ ಮೀಸಲು ಸೌಲಭ್ಯವಿದೆ. ಇದಕ್ಕೆ ಸಂಬಂಧಿಸಿದ ವಿವರ ಮಾಹಿತಿಗಳಿಗೆ ಪ್ರಾಧಿಕಾರದ ಜಾಲತಾಣ **http://cetonline.karnataka.gov.in** ನೋಡಬಹುದು.



ನಿಮಗೆಲ್ಲ ತಿಳಿದಿರುವಂತೆ ಸೀಟು ಹಂಚಿಕೆಯನ್ನು ಅಭ್ಯರ್ಥಿಗಳಿಂದ ಇಚ್ಛೆ / ಆಯ್ಕೆಗಳನ್ನು ಪಡೆದು, ಮೂರು ಸುತ್ತುಗಳಲ್ಲಿ ಆನ್‌ಲೈನ್ ಮೂಲಕ ನಡೆಸಲಾಗುವುದು. ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು ಎಂದರೇನು? ಹೇಗೆ? ಸೀಟು ಹಂಚಿಕೆಗೆ ಅಭ್ಯರ್ಥಿಯು ಯಾವರೀತಿ ಸಿದ್ಧವಾಗಿರಬೇಕು? ಮುಂತಾದ ಪೂರಕವಾದ ಮಾಹಿತಿಯನ್ನು ನಿಮಗೆ ನಂತರದ ದಿನಗಳಲ್ಲಿ ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ವಿವರವಾಗಿ ನೀಡಲಾಗುವುದು.



# ಅರ್ಹತಾ ಖಂಡ (Clause- a to o) ‘ಎ’ ಯಿಂದ ‘ಓ’ ವರೆಗಿನ ಸಂಕ್ಷಿಪ್ತ ವಿವರ

ಯಾವ ಖಂಡಿಕೆಯಡಿ ಯಾರು ಅರ್ಹರಾಗುತ್ತಾರೆ? ಅರ್ಜಿ ತುಂಬುವಾಗ ಸೂಕ್ತವಾದ ಖಂಡಿಕೆಯನ್ನೇ ಆಯ್ಕೆ ಮಾಡಿಕೊಳ್ಳಿ. ಸಂಪೂರ್ಣ ವಿವರಗಳಿಗಾಗಿ ಇ–ಮಾಹಿತಿ ಪುಸ್ತಕವನ್ನು ಕಡ್ಡಾಯವಾಗಿ ನೋಡಿ.

**Clause- a:** 1 ರಿಂದ 12ನೇ ತರಗತಿಯವರೆಗೆ ಕನಿಷ್ಠ 7 ವರ್ಷ ಕರ್ನಾಟಕದಲ್ಲಿ ಓದಿ ಪಾಸಾಗಿರಬೇಕು. ಈ ಅವಧಿಯಲ್ಲಿ 10 ಅಥವಾ 12ನೇ ತರಗತಿ, ಇವುಗಳಲ್ಲಿ ಯಾವುದಾದರೂ ಒಂದು ಪರೀಕ್ಷೆ ಕರ್ನಾಟಕದಲ್ಲೇ ಬರೆದು ಉತ್ತೀರ್ಣರಾಗಿರಬೇಕು.

**Clause – b:** ಅಭ್ಯರ್ಥಿಯು ಪ್ರಥಮ ಮತ್ತು ದ್ವಿತೀಯ ಪಿಯುಸಿ ಅಥವಾ 11 ಮತ್ತು 12ನೇ ತರಗತಿಯನ್ನು ರಾಜ್ಯದಲ್ಲಿ ಓದಿ ಪಾಸಾಗಿರಬೇಕು. ವಿದ್ಯಾರ್ಥಿಯ ತಂದೆ– ತಾಯಿ ಇಬ್ಬರಲ್ಲಿ ಒಬ್ಬರು ಕನಿಷ್ಠ 7 ವರ್ಷ ರಾಜ್ಯದಲ್ಲಿ ವ್ಯಾಸಂಗ ಮಾಡಿರಬೇಕು.

**Clause – c:** ಅಭ್ಯರ್ಥಿಯ ತಂದೆ– ತಾಯಿ ಇಬ್ಬರಲ್ಲಿ ಒಬ್ಬರ ಮಾತೃಭಾಷೆಯು ಕನ್ನಡ, ತುಳು, ಕೊಡವ ಅಥವಾ ಬ್ಯಾರಿ ಇವುಗಳಲ್ಲಿ ಯಾವುದಾದರೊಂದು ಆಗಿರಬೇಕು. ತಂದೆ– ತಾಯಿ ಇಬ್ಬರಲ್ಲಿ ಒಬ್ಬರು ಈ ಹಿಂದೆ ರಾಜ್ಯದ ನಿವಾಸಿಯಾಗಿದ್ದಿರಬೇಕು. 01–05–2025 ಕ್ಕೆ ರಾಜ್ಯದ ಹೊರಗಡೆ 12ನೇ ತರಗತಿ ಪಾಸಾಗಿರಬೇಕು. ಅಭ್ಯರ್ಥಿಯು ಕೆಇಎ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಪಾಸಾಗಿರಬೇಕು.

**Clause – d:** ಅಭ್ಯರ್ಥಿಯ ಮಾತೃಭಾಷೆಯು ಕನ್ನಡ, ತುಳು, ಕೊಡವ ಅಥವಾ ಬ್ಯಾರಿ ಇವುಗಳಲ್ಲಿ ಯಾವುದಾದರೊಂದು ಆಗಿರಬೇಕು. ಮಹಾರಾಷ್ಟ್ರದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್, ಗಡಹಿಂಗ್ಲಜ ತಾಲ್ಲೂಕು ವ್ಯಾಪ್ತಿಯಲ್ಲಿ ಅಥವಾ ಕೇರಳದ ಕಾಸರಗೋಡು, ಹೊಸದುರ್ಗ ಅಥವಾ ಮಂಜೇಶ್ವರ ತಾಲ್ಲೂಕು ವ್ಯಾಪ್ತಿಯಲ್ಲಿ 1ರಿಂದ 12ನೇ ತರಗತಿವರೆಗಿನ ಅವಧಿಯಲ್ಲಿ ಕನಿಷ್ಠ ಏಳು (07) ವರ್ಷ ವಾಸಿಸಿರಬೇಕು. ಅಭ್ಯರ್ಥಿಯು ಕೆಇಎ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಪಾಸಾಗಿರಬೇಕು.

**Clause – e:** ಅಭ್ಯರ್ಥಿಯು ರಕ್ಷಣಾ ಸಿಬ್ಬಂದಿಯ ಮಗ ಅಥವಾ ಮಗಳಾಗಿರಬೇಕು. ಅಭ್ಯರ್ಥಿಯು ಕರ್ನಾಟಕದಲ್ಲಿ 11 ಮತ್ತು 12ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಅವಧಿಯಲ್ಲಿ ಅಭ್ಯರ್ಥಿಯ ರಕ್ಷಣಾ ಸಿಬ್ಬಂದಿಯಾಗಿರುವ ತಂದೆ ಅಥವಾ ತಾಯಿ ಕರ್ನಾಟಕದಲ್ಲಿ ನಿರಂತರವಾಗಿ ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿರಬೇಕು.

**Clause – f:** ಅಭ್ಯರ್ಥಿಯು ಕರ್ನಾಟಕ ಮೂಲದ ರಕ್ಷಣಾ ಸಿಬ್ಬಂದಿಯ ಮಗ ಅಥವಾ ಮಗಳಾಗಿರಬೇಕು. ರಕ್ಷಣಾ ಸಿಬ್ಬಂದಿಯಾಗಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ಮೂಲದ ವ್ಯಕ್ತಿಯು ಸೇವೆಗೆ ಸೇರುವಾಗ ಕರ್ನಾಟಕದಲ್ಲಿರುವ ಸ್ಥಳವನ್ನು ತನ್ನ ಸ್ವಂತ ಊರು ಎಂದು ಘೋಷಿಸಿರಬೇಕು.

**Clause – g:** ಅಭ್ಯರ್ಥಿಯ ತಂದೆ ಅಥವಾ ತಾಯಿ ರಕ್ಷಣಾ ಸಿಬ್ಬಂದಿಯಾಗಿರಬೇಕು ಹಾಗು ಕನಿಷ್ಠ ಒಂದು ವರ್ಷ ಕರ್ನಾಟಕದಲ್ಲಿ ಸೇವೆ ಸಲ್ಲಿಸಿರಬೇಕು ಹಾಗು ಸೇವೆಗೆ ಜಮ್ಮು ಕಾಶ್ಮೀರ ಅಥವಾ ಈಶಾನ್ಯ ರಾಜ್ಯಗಳ ತೊಂದರೆಗ್ರಸ್ತ ಪ್ರದೇಶಕ್ಕೆ ನಿಯುಕ್ತಿಗೊಂಡಿರಬೇಕು. ಆತ/ಆಕೆಯ ಕುಟುಂಬಕ್ಕೆ ಕರ್ನಾಟಕದಲ್ಲಿ ವಾಸ ಮುಂದುವರಿಸಲು ರಕ್ಷಣಾ ಇಲಾಖೆ ಪ್ರಾಧಿಕಾರವು ಅನುಮತಿ ನೀಡಿರಬೇಕು.

**Clause – h:** ಅಭ್ಯರ್ಥಿಯು ಮಾಜಿ ಸೈನಿಕನ/ಮಹಿಳಾ ಸೈನಿಕಳ ಮಗ ಅಥವಾ ಮಗಳಾಗಿರಬೇಕು. ಕರ್ನಾಟಕ ಮೂಲದವರಾಗಿರಬೇಕು.

**Clause – i:** ಕೇಂದ್ರ ಸರ್ಕಾರಿ ಉದ್ಯಮದ ಅಥವಾ ರಾಜ್ಯ ಸರ್ಕಾರಿ ಉದ್ಯಮದ ಅಥವಾ ಜಂಟಿ ವಲಯದ ಉದ್ಯಮದ ಉದ್ಯೋಗಿಯ ಮಗ ಇಲ್ಲವೇ ಮಗಳಾಗಿರಬೇಕು. ಅಭ್ಯರ್ಥಿಯ 11 ಮತ್ತು 12ನೇ ತರಗತಿ ಓದುವ ಎರಡು ವರ್ಷಗಳಲ್ಲಿ, ಅವರ ತಂದೆ/ತಾಯಿ ಕನಿಷ್ಠ ಒಂದು ವರ್ಷ ಸೇವೆಯನ್ನು ಕರ್ನಾಟಕದಲ್ಲಿ ಸಲ್ಲಿಸಿರಬೇಕು. ಅಭ್ಯರ್ಥಿಯು ಕರ್ನಾಟಕದಲ್ಲಿ 12ನೇ ತರಗತಿ ಪಾಸಾಗಿರಬೇಕು.

**Clause – j:** ಅಭ್ಯರ್ಥಿಯ ತಂದೆ ಅಥವಾ ತಾಯಿಯು ಕೇಂದ್ರ ಸರಕಾರದ ಅಥವಾ ಕೇಂದ್ರ ಸರಕಾರದ ಉದ್ಯಮದ ಅಥವಾ ರಾಜ್ಯ ಸರಕಾರಿ ಉದ್ಯಮದ ಅಥವಾ ಜಂಟಿ ವಲಯದ ಉದ್ಯಮದ ಸೇವಾನಿರತ ಇಲ್ಲವೇ ನಿವೃತ್ತ ಉದ್ಯೋಗಿಯಾಗಿರಬೇಕು. ತಂದೆ ಅಥವಾ ತಾಯಿಯು ಸೇವೆಗೆ ಸೇರುವಾಗ ಕರ್ನಾಟಕದ ಯಾವುದೇ ಒಂದು ಸ್ಥಳವನ್ನು ತನ್ನ ಸ್ವಂತ ಊರು ಎಂದು ಉದ್ಯೋಗ ಸಂಸ್ಥೆಗೆ ಅಧಿಕೃತವಾಗಿ ತಿಳಿಸಿರಬೇಕು. ತಂದೆ ಅಥವಾ ತಾಯಿಯು ಕರ್ನಾಟಕದಲ್ಲಿ ಕನಿಷ್ಠ 7 ವರ್ಷ ಓದಿರಬೇಕು.

**Clause – k:** ಅಭ್ಯರ್ಥಿಯ ತಂದೆ ಅಥವಾ ತಾಯಿಯು ಮಾಜಿ ಇಲ್ಲವೇ ಹಾಲಿ ಸಂಸತ್ ಸದಸ್ಯರಾಗಿ ಕರ್ನಾಟಕದಿಂದ ಆಯ್ಕೆಯಾಗಿರಬೇಕು. ಅಭ್ಯರ್ಥಿಯು 12ನೇ ತರಗತಿ ಪಾಸಾಗಿರಬೇಕು.

**Clause – l:** ಅಭ್ಯರ್ಥಿಯ ತಂದೆ ಅಥವಾ ತಾಯಿಯು ಕರ್ನಾಟಕ ಕೇಡರ್ ಅಧಿಕಾರಿಯಾಗಿ ಅಖಿಲ ಭಾರತ ಸೇವೆಯಲ್ಲಿದ್ದು ಕರ್ನಾಟಕದ ಹೊರಗೆ ಸೇವೆ ಸಲ್ಲಿಸುತ್ತಿರಬೇಕು ಅಥವಾ ಸೇವೆ ಸಲ್ಲಿಸಿ ನಿವೃತ್ತರಾಗಿರಬೇಕು. ಅಭ್ಯರ್ಥಿಯು 1ರಿಂದ 12ನೇ ತರಗತಿಯವರೆಗಿನ ಅವಧಿಯಲ್ಲಿ ರಾಜ್ಯದ ಹೊರಗೆ ವ್ಯಾಸಂಗ ಮಾಡಿದ ಅವಧಿಯನ್ನು ಅರ್ಹತಾ ಖಂಡ “ಎ” ಅಡಿ ನಿಗದಿಗೊಳಿಸಿರುವ ರಾಜ್ಯದಲ್ಲಿ 07 ವರ್ಷ ವ್ಯಾಸಂಗ ಮಾಡಿರಬೇಕು ಎಂಬ ಅವಧಿಗೆ ಸರಿ ಹೊಂದಿಸಲಾಗುವುದು.

**Clause- m:** ಅಭ್ಯರ್ಥಿಯು ಜಮ್ಮು–ಕಾಶ್ಮೀರದಿಂದ ವಲಸೆ ಬಂದಿರುವವರ ಮಗ ಅಥವಾ ಮಗಳಾಗಿರಬೇಕು.

**Clause - n:** ಅಭ್ಯರ್ಥಿಯು 1ರಿಂದ 10ನೇ ತರಗತಿಯವರೆಗೆ ಕರ್ನಾಟಕದಿಂದ ಹೊರಗೆ ಕನ್ನಡ ಮಾಧ್ಯಮದಲ್ಲಿ ಓದಿರಬೇಕು. ಅಭ್ಯರ್ಥಿಯು 12ನೇ ತರಗತಿ ಪಾಸಾಗಿರಬೇಕು. (ಸೂಚನೆ: ಅಭ್ಯರ್ಥಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ)

**Clause-o** ಅಭ್ಯರ್ಥಿಯು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್– ಸೆಂಟ್ರಲ್ ಆರ್ಮ್ಡ್ ಪೊಲೀಸ್ ಫೋರ್ಸ್) ಸೇವಾ ನಿರತ ಅಥವಾ ನಿವೃತ್ತ ಉದ್ಯೋಗಿಯ ಮಗ ಇಲ್ಲವೇ ಮಗಳಾಗಿರಬೇಕು. ಅಭ್ಯರ್ಥಿಯ ತಂದೆ ಅಥವಾ ತಾಯಿಯು ಮೇಲ್ಕಂಡ ಸೇವೆಗೆ ಸೇರುವಾಗ ತನ್ನ ಸ್ವಂತ ಊರು ಕರ್ನಾಟಕದಲ್ಲಿದೆ ಎಂದು ಘೋಷಿಸಿಕೊಂಡಿರಬೇಕು. ಅಭ್ಯರ್ಥಿಯು 12ನೇ ತರಗತಿ ಪಾಸಾಗಿರಬೇಕು.



# ಕರ್ನಾಟಕ ಪರೀಕ್ಷಾ ಪ್ರಾಧಿಕಾರ


**18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು–560012**

ಇ–ಮೇಲ್ : keaugcet25@gmail.com

ವೆಬ್ ಸೈಟ್ : https://cetonline.karnataka.gov.in/kea

X twitter : @KEA_karnataka

**ಸಹಾಯವಾಣಿ:** 080 23 460 460 (ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆ ವರೆಗೆ)

ಅಭ್ಯರ್ಥಿಗಳು 9035053484 ಸಂಖ್ಯೆಯಿಂದ ಸಂದೇಶಗಳನ್ನು ಸ್ವೀಕರಿಸುತ್ತಾರೆ